ಮೂಲ ದಾವಾ ನಂಃ 24/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **07.11.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಮತ್ತು 1 ನೇ ಪ್ರತಿವಾದಿಯ ತಂದೆಯಾದ ಕೆ.ವಿ ದಾಮೋದರ ಮೂಲತಃ ಕೇರಳಾ ರಾಜ್ಯದವರು ಎಂದರೆ ಹೌದು. ಎಷ್ಟು ವರ್ಷಗಳ ಹಿಂದೆ ನಮ್ಮ ತಂದೆ ಕೇರಳಾದಿಂದ ಕರ್ನಾಟಕಕ್ಕೆ ಬಂದಿರುತ್ತಾರೆ ಎಂದರೆ, ಸಾಕ್ಷಿಯು ನಾನು ಹುಟ್ಟುವ ಮೊದಲೇ ಬಂದಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಅವರಿಗೆ ಕುಟುಂಬದ ಆಸ್ತಿಗಳಲ್ಲಿ ಇದ್ದಂತಹ ಪಾಲ್ ನ್ನು ಹಣದ ರೂಪದಲ್ಲಿ ಪಡೆದುಕೊಂಡು ಕರ್ನಾಟಕಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಕಾಲಕ್ಕೆ ಹುಟ್ಟದೇ ಇದ್ದ ಕಾರಣ, ನನಗೆ ಆ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹೀಗೆ ನಮ್ಮ ತಂದೆ ತಮ್ಮ ಪಾಲಿನ ಆಸ್ತಿಯನ್ನು ಹಣದ ರೂಪದಲ್ಲಿ ಪಡೆದುಕೊಂಡು ಬಂದು ಮುಂಡಗೋಡಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ, ಅವರು ಪಾಲನ್ನು ಪಡೆದುಕೊಂಡು ಬಂದಿದ್ದು ಇರುವುದಿಲ್ಲ. ಸಾಕ್ಷಿ ಮುಂದುವರೆದು, ನಮ್ಮ ತಂದೆಯವರು ಮುಂಡಗೋಡಿಗೆ ಬಂದಾಗ, ತಟ್ಟಿಹಳ್ಳಿಯಲ್ಲಿ ಸರ್ಕಾರ ನೀಡಿದ ಜಮೀನಿನಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಹೀಗೆ ನಮ್ಮ ತಂದೆ ಅವರ ಪಾಲನ್ನು ಹಣದ ರೂಪದಲ್ಲಿ ಪಡೆದುಕೊಂಡು ಬಂದು ಮುಂಡಗೋಡಿನಲ್ಲಿ ಸಾಕಷ್ಟು ಕೃಷಿ ಜಮೀನುಗಳನ್ನು ಹೊಂದಿದ್ದರು ಎಂದರೆ ಇಲ್ಲ. ಸಾಕ್ಷಿ ಮುಂದುವರೆದು, ನಮ್ಮ ತಂದೆಯವರಿಗೆ ಸರ್ಕಾರದಿಂದ ಮಂಜೂರಿ ಮಾಡಿದ ಜಮೀನು ಮಾತ್ರ ಇತ್ತು. ಹೀಗೆ ಸದರಿ ಕೃಷಿ ಜಮೀನುಗಳನ್ನು ನಮ್ಮ ತಂದೆ 1 ನೇ ಪ್ರತಿವಾದಿಯನ್ನು ಒಳಗೊಂಡು ಇತರೇ ಹಕ್ಕುದಾರರೊಂದಿಗೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸುಳ್ಳು. ಅಂತಹ ಕೃಷಿ ಜಮೀನುಗಳಿಂದ ಬಂದಂತಹ ಪ್ರತಿಫಲದಿಂದ ಮತ್ತು ಉಳಿತಾಯದಿಂದ ನಮ್ಮ ತಂದೆಯವರು ಹಳ್ಳೂರು ಗ್ರಾಮದಲ್ಲಿರುವ ದಾವಾಸ್ತಿಯನ್ನು ಹೊಂದಿ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ದುಡಿದು ಗಳಿಸಿದ ಹಣದಿಂದಲೇ ದಾವಾಸ್ತಿಯನ್ನು ಹೊಂದಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆದ ಕಾರಣ, ದಾವಾಸ್ತಿ ಜಂಟಿ ಮಾಲೀಕತ್ವದ ಆಸ್ತಿಯಾಗಿರುತ್ತದೆ ಎಂದರೆ, ಸಾಕ್ಷಿಯು ನಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಹೀಗೆ ಕೃಷಿ ಜಮೀನುಳಿಂದ ಬಂದ ಪ್ರತಿಫಲದ ಉಳಿತಾಯದಿಂದ ನಮ್ಮ ತಂದೆಯವರು ದಾವಾಸ್ತಿಗೆ ಹೊಂದಿಕೊಂಡಂತಹ ಜಾಗೆಯಲ್ಲಿ ಮನೆ ನಂಬರ್ 117 ನ್ನು ಹೊರತುಪಡಿಸಿ, ಇನ್ನೊಂದು ಮನೆಯನ್ನು ಕಟ್ಟಿರುತ್ತಾರೆ ಎಂದರೆ, ಸಾಕ್ಷಿಯು ಒಟ್ಟು ಎರಡು ಮನೆಗಳನ್ನು ಅಂದರೇ, 117/1 ಮತ್ತು 117/1 ಎ ನಿರ್ಮಿಸಿರುತ್ತಾರೆ. ನಮ್ಮ ತಂದೆಯವರು ತಮ್ಮ ಜೀವಿತಾಧಿಯಲ್ಲಿ ಮರಣೋತ್ತರ ದಾಖಲಾತಿಯನ್ನು ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಸದರಿ ಕಾಲಕ್ಕೆ ಅಂದರೆ 1998 ರಲ್ಲಿ ಪಾರ್ಶೋವಾಯುಯಿಂದ ಬಳಳುತ್ತಿದ್ದರು ಎಂದರೆ ಸರಿ. ನಾನು ಮಸ್ಕತನಲ್ಲಿ ಎಷ್ಟು ವರ್ಷಗಳ ಕಾಲ ಇದ್ದೆನು ಎಂದರೆ, 1993 ರಲ್ಲಿ ಮಸ್ಕತಗೆ ಹೋಗಿದ್ದು 2018 ನೇ ಇಸ್ವಿಯಲ್ಲಿ ವಾಪಸ್ಸು ಬಂದಿರುತ್ತೇನೆ. ನಾನು ಮಸ್ಕತನಲ್ಲಿರುವ ಕಾಲಕ್ಕೆ ನನಗೆ ಮತ್ತು 1 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಗಳನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಾ ಬಂದಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಸಂಪೂರ್ಣ ಜವಾಬ್ದಾರಿ 1 ನೇ ಪ್ರತಿವಾದಿ ಮೇಲೆ ಇತ್ತು ಎಂದರೆ ಸರಿ. ನಾನು ನನ್ನ ವಾದಪತ್ರದ 4 ನೇ ಪ್ಯಾರಾದಲ್ಲಿ " 1 ನೇ ಪ್ರತಿವಾದಿಯನ್ನು ಬಟ್ಟು ------ದಾನವಾಗಿ ನೀಡಿದ್ದ " ಇದ್ದು ಎಂದು ನಮೂದು ಮಾಡಲಾಗಿದೆ ಎಂದರೆ, ಸಾಕ್ಷಿಯು 1 ನೇ ಪ್ರತಿವಾದಿ ನಮ್ಮ ತಂದೆಯನ್ನು ದೇಖ ರೇಖಿ ಮಾಡಿದ್ದು ನಿಜವೆಂದು ನುಡಿಯುತ್ತಾರೆ. ನಮ್ಮ ತಂದೆಗೆ ಪಾರ್ಶೋವಾಯುವಾಗಿ ಬಳಳುತ್ತಿದ್ದಾಗ, ನಾನು ಅವರನ್ನು ನೋಡಲು ಬಂದಿದ್ದೆನು. ನಮ್ಮ ತಂದೆಯ ಕಷ್ಟ ಕಾಲದಲ್ಲಿ ನಾನು ಅವರಿಗೆ ಯಾವುದೇ ರೀತಿಯಲ್ಲಿ ಹಣದ ಸಹಾಯ ಮಾಡಿದ್ದು ಇರುವುದಿಲ್ಲ ಎಂದರೆ ಸುಳ್ಳು. ವೈಭವತೊರಿದ

ಜೀವನವನ್ನು ನಡೆಸಲು ಮಸ್ಕತಗೆ ನನ್ನ ಗಂಡನೊಂದಿಗೆ ಹೋಗಿದ್ದೆನು ಎಂದರೆ ಸುಳ್ಳು. ನಮ್ಮ ತಂದೆಯ ಸೇವೆ ಮಾಡುವುದು ಬರಬಹುದು ಎಂಬ ಕಾರಣಕ್ಕಾಗಿ ದೇಶವನ್ನು ತೊರದಿದ್ದೆ ಎಂದರೆ ಸುಳ್ಳು. ನಮ್ಮ ತಂದೆಯ ಕೊನೆಗಾಲದಲ್ಲಿ ಹೇಗಾದರೂ ಮಾಡಿ ಅವರ ಆಸ್ತಿಯನ್ನು ಕಬಳಿಸುವ ಸಲುವಾಗಿ ನಾನು ಭಾರತಕ್ಕೆ ಮರಳಿ ಬಂದಿರುತ್ತೇನೆ ಎಂದರೆ ಸುಳ್ಳು. ನಮ್ಮ ತಂದೆಯವರು ದಾವಾಸ್ತಿಯನ್ನು ನನಗೆ ವರ್ಗಾವಣೆ ಮಾಡುವ ಯಾವುದೇ ಸ್ವತಂತ್ರ ಅಧಿಕಾರವನ್ನು ಹೊಂದಿರಲಿಲ್ಲ ಎಂದರೆ, ಸಾಕ್ಷಿಯು ದಾವಾಸ್ತಿಯು ಅವರ ಸ್ವಯಾರ್ಜಿತ ಆಸ್ತಿ ಆದ ಕಾರಣ, ಅವರಿಗೆ ಅಧಿಕಾರವಿತ್ತು ಎಂದು ನುಡಿಯುತ್ತಾರೆ. ದಾವಾಸ್ತಿಯು 1 ನೇ ಪ್ರತಿವಾದಿಯ ಜಂಟಿ ಹಕ್ಕಿನ ಆಸ್ತಿಯಾಗಿತ್ತು ಎಂದರೆ ಸುಳ್ಳು. ನಿಪಿ.3 ನಮ್ಮ ತಂದೆಯವರ ಜೀವಿತಾವಧಿಯಲ್ಲಿ ನಾನು ಮೋಸದಿಂದ ಮಾಡಿಕೊಂಡ ಪತ್ರವಾಗಿರುತ್ತದೆ ಎಂದರೆ ಸುಳ್ಳು. ನನ್ನ ಪ್ರಕಾರ ದಾವಾಸ್ತಿ ಎಂದರೆ 117/1 ಮತ್ತು 117/1 ಎ ಆಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಪ್ರಕಾರ ದಾವಾಸ್ತಿ ವರ್ಗಾವಣೆ ಆಗಿರುತ್ತದೆ ಎಂದರೆ, ನಮ್ಮ ತಂದೆಯವರು ನನಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಾಖಲಾತಿ ಮುಖಾಂತರ ನಮ್ಮ ತಂದೆ ದಾವಾಸ್ತಿಯನ್ನು ನನಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ, ದಾಖಲಾತಿ ಇದೆ ಅದನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾವು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲಾತಿ ಅವುಗಳಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ದಾವಾಸ್ತಿ ವರ್ಗಾವಣೆ ಆಗಿದ್ದು ಇರುವುದಿಲ್ಲ ಎಂದರೆ ಸುಳ್ಳು. ಒಂದುವೇಳೆ ನನ್ನ ಹೆಸರಿಗೆ ವರ್ಗಾವಣೆ ಮಾಡಿದ ದಾಖಲಾತಿ ಇದ್ದಲ್ಲಿ , ನಾನು ಅದನ್ನು ಹಾಜರುಪಡಿಸುತ್ತಿದ್ದೆ ಎಂದರೆ, ಸಾಕ್ಷಿಯು ಮುದ್ದತ್ ನೀಡಿದ್ದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಪಟ್ಟಣ ಪಂಚಾಯತ್ ಅಧಿಕಾರಿಗಳನ್ನು ನನ್ನ ಸುಪರ್ದಿಗೆ ತೆಗೆದುಕೊಂಡು ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು. ದಾವಾಸ್ತಿ ಪೂರ್ವ ಪಶ್ಚಿಮವಾಗಿ 67 ಅಡಿ ಮತ್ತು ಉತ್ತರ ದಕ್ಷಿಣವಾಗಿ 190 ಅಡಿ ಇದೆ ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ , ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಮನೆಯನ್ನು ತೋರಿಸಲು ನಮೂನೆ-3 ನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**